**ಕರ್ನಾಟಕ ಸರ್ಕಾರ**

ಸಂಖ್ಯೆ:ಆಯುಕ್ತರು/ಗ್ರಾನೀಸನೈಇ/ವಿ/2014-15

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು,ದಿನಾಂಕ:19-03-2015

ಅಧಿಕೃತ ಜ್ಞಾಪನ

**ವಿಷಯ:** ಗ್ರಾಮೀಣ ಕುಡಿಯುವ ನೀರು ಯೋಜನೆಗಳ ವಿದ್ಯುದ್ಧೀಕರಣ ಕುರಿತು.

**ಉಲ್ಲೇಖ:**
1) ಸಂಖ್ಯೆ: ಆಯುಕ್ತರು/ಗ್ರಾನೀಸ & ನೈಇ/ವಿದ್ಯುದ್ಧೀಕರಣ/ 2014-15, ದಿನಾಂಕ:18.09.2014.
2) ಸಂಖ್ಯೆ: ಆಯುಕ್ತರು/ಗ್ರಾನೀಸ & ನೈಇ/ವಿದ್ಯುದ್ಧೀಕರಣ/ 2014-15, ದಿನಾಂಕ:13.02.2015.

ಗ್ರಾಮೀಣ ಪ್ರದೇಶಗಳಲ್ಲಿನ ಜನ-ಜಾನುವಾರುಗಳಿಗೆ ಶುದ್ಧ ಕುಡಿಯುವ ನೀರಿನ ಯೋಜನೆಗಳ ಅಂದಾಜಿನಲ್ಲಿ ವಿದ್ಯುದ್ಧೀಕರಣ ಕಾಮಗಾರಿಗಳನ್ನು ಸಂಬಂಧಿಸಿದದ ESCOM ಗಳಿಗೆ ಠೇವಣಿ ಮಾಡಿ ಅನುಷ್ಠಾನಗೊಳಿಸುವ ಬಗ್ಗೆ ಎಲ್ಲಾ ಜಿಲ್ಲೆಗಳಿಗೆ ಅನ್ವಯವಾಗುವಂತೆ ಉಲ್ಲೇಖಿತ(2)ರ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು, ಆದರೆ ಸಂಬಂಧಿಸಿದ ESCOM ಅಧಿಕಾರಿಗಳು ವಿದ್ಯುದ್ಧೀಕರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಒಪ್ಪದೆ ಇರುವುದರಿಂದ ಕುಡಿಯವ ನೀರು ಪೂರೈಕೆಯಲ್ಲಿ ತೊಂದರೆ ಆಗುತ್ತಿದೆ.

ಈ ಹಿನ್ನಲೆಯಲ್ಲಿ 2014-15ನೇ ಸಾಲಿನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿನ ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ ತ್ವರಿತವಾಗಿ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿರುವುದರಿಂದ, ವಿದ್ಯುದ್ಧೀಕರಣ ಕಾಮಗಾರಿಯನ್ನು ಜಿಲ್ಲಾ ಮಟ್ಟದ ಹಂತದಲ್ಲಿಯೇ ನಿಯಮಾನುಸಾರ ಟೆಂಡರ್ ಅಥವಾ ನಿಯಮಗಳ ಮಿತಿಯೊಳಗೆ ಇದ್ದಲ್ಲಿ ತುಂಡು ಗುತ್ತಿಗೆ ಆಧಾರದ ಮೇಲೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ವಹಿಸಲು ಆದೇಶಿಸಿದೆ.

19/3/15
(ಟಿ.ಎಂ. ವಿಜಯ ಭಾಸ್ಕರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

**ಇವರಿಗೆ:**

1) ರಾಜ್ಯದ ಎಲ್ಲಾ (30) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2) ರಾಜ್ಯದ ಎಲ್ಲಾ (30) ಜಿಲ್ಲೆಗಳ ಜಿಲ್ಲಾಧಿಕಾರಿಗಳು.
3) ರಾಜ್ಯದ ಎಲ್ಲಾ (4) ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ. ಮತ್ತು ನೈ. ವೃತ್ತಗಳು.
4) ರಾಜ್ಯದ ಎಲ್ಲಾ (30) ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ. ಮತ್ತು ನೈ. ವಿಭಾಗಗಳು.
5) ರಾಜ್ಯದ ಎಲ್ಲಾ (176) ಗ್ರಾ.ಕು.ನೀ. ಮತ್ತು ನೈ. ಉಪ ವಿಭಾಗಗಳು.